## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 326 |
| ಸದಸ್ಯರ ಹೆಸರು | : | ಶ್ರೀ ದಿನೇಶ್ ಗೂಳಿಗೌಡ<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 21-12-2022 |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

| ಕ್ರಮ ಸಂಖ್ಯೆ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಬೆಂಗಳೂರು-ಮೈಸೂರು ರಾಷ್ಟ್ರೀಯ ಹೆದ್ದಾರಿಯ ಕಾಮಗಾರಿಯು ಯಾವಾಗ ಪ್ರಾರಂಭವಾಯಿತು; | ರಾಷ್ಟ್ರೀಯ ಹೆದ್ದಾರಿ-275 ಬೆಂಗಳೂರು-ಮೈಸೂರು ವಿಭಾಗದ ರಸ್ತೆಯ ಅಭಿವೃದ್ಧಿ ಕಾರ್ಯವನ್ನು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಇವರ ವತಿಯಿಂದ ಕೈಗೊಳ್ಳಲಾಗುತ್ತಿದೆ.<br><br>ಸದರಿ ಹೆದ್ದಾರಿಯನ್ನು 6 ಪಥದ ರಸ್ತೆಯನ್ನಾಗಿ 2 ಪ್ಯಾಕೇಜ್‌ಗಳಲ್ಲಿ ಅಭಿವೃದ್ಧಿ ಪಡಿಸಲಾಗುತ್ತಿದ್ದು, ಕಾಮಗಾರಿಗಳ ವಿವರ ಈ ಕೆಳಕಂಡಂತಿದೆ.<br>1. ಪ್ಯಾಕೇಜ್-1: ರಾಷ್ಟ್ರೀಯ ಹೆದ್ದಾರಿ-275 ರ ಬೆಂಗಳೂರು - ನಿಡಘಟ್ಟ ವಿಭಾಗದ ಕಾಮಗಾರಿ<br>• ಪ್ರಾರಂಭ ದಿನಾಂಕ: 14.05.2019<br>• ಅಭಿವೃದ್ಧಿ ಪಡಿಸಬೇಕಾದ ಉದ್ದ: 56.20 ಕಿ.ಮೀ.<br>• ಅಭಿವೃದ್ಧಿ ಪಡಿಸಲಾದ ಉದ್ದ: 55.89 ಕಿ.ಮೀ.<br>• ಭೌತಿಕ ಪ್ರಗತಿ: 96.79%<br><br>2. ಪ್ಯಾಕೇಜ್-2: ರಾಷ್ಟ್ರೀಯ ಹೆದ್ದಾರಿ-275 ರ ನಿಡಘಟ್ಟ-ಮೈಸೂರು ವಿಭಾಗದ ಕಾಮಗಾರಿ<br>• ಪ್ರಾರಂಭ ದಿನಾಂಕ: 10.12.2019<br>• ಅಭಿವೃದ್ಧಿ ಪಡಿಸಬೇಕಾದ ಉದ್ದ: 61.104 ಕಿ.ಮೀ.<br>• ಅಭಿವೃದ್ಧಿ ಪಡಿಸಲಾದ ಉದ್ದ: 56.16 ಕಿ.ಮೀ.<br>• ಭೌತಿಕ ಪ್ರಗತಿ: 92.06% |
| ಆ) | ಪ್ರಸ್ತುತ ಕಾಮಗಾರಿಯ ಪ್ರಗತಿಯು ಯಾವ ಹಂತದಲ್ಲಿದೆ; | |
| ಇ) | ಬೆಂಗಳೂರು - ಮೈಸೂರು ಎರಡು ನಗರಗಳ ಮಧ್ಯೆ ಬರುವಂತಹ ಮದ್ದೂರು ಪಟ್ಟಣಕ್ಕೆ ಪ್ರವೇಶಿಸಲು ನಿಡಘಟ್ಟದ ಬಳಿ ಸರ್ವೀಸ್ ರಸ್ತೆಯನ್ನು ಬಿಡಬೇಕೆಂದು ಸಾರ್ವಜನಿಕರು ಹಾಗೂ ಜನಪ್ರತಿನಿಧಿಗಳು ಸರ್ಕಾರಕ್ಕೆ ಮನವಿ ಸಲ್ಲಿಸಿರುವುದು ನಿಜವೇ; | ಬೆಂಗಳೂರು - ಮೈಸೂರು ಎರಡು ನಗರಗಳ ಮಧ್ಯೆ ಬರುವಂತಹ ಮದ್ದೂರು ಪಟ್ಟಣಕ್ಕೆ ಪ್ರವೇಶಿಸಲು/ ನಿರ್ಗಮಿಸಲು ನಿಡಘಟ್ಟದ ಬಳಿ ಹಾಗೂ ಚನ್ನೇಗೌಡನದೊಡ್ಡಿ ಬಳಿ ಸರ್ವೀಸ್ ರಸ್ತೆಯನ್ನು ಬಿಡಬೇಕೆಂದು ಸಾರ್ವಜನಿಕರು ಹಾಗೂ ಜನಪ್ರತಿನಿಧಿಗಳಿಂದ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ರವರಿಗೆ ಯಾವುದೇ ಮನವಿ ಸ್ವೀಕೃತವಾಗಿರುವುದಿಲ್ಲ ಎಂದು ವರದಿಸಿರುತ್ತಾರೆ. |

| | | |
|---|---|---|
| ಈ) | ಮೈಸೂರು- ಬೆಂಗಳೂರು ಎರಡು ನಗರಗಳ ಮಧ್ಯೆ ಬರುವಂತಹ ಮದ್ದೂರು ಪಟ್ಟಣಕ್ಕೆ ಪ್ರವೇಶಿಸಲು ಚನ್ನೇಗೌಡನದೊಡ್ಡಿಯ ಬಳಿ ಸರ್ವೀಸ್ ರಸ್ತೆಯನ್ನು ಬಿಡಬೇಕೆಂದು ಸಾರ್ವಜನಿಕರು ಹಾಗೂ ಜನಪ್ರತಿನಿಧಿಗಳು ಸರ್ಕಾರಕ್ಕೆ ಮನವಿ ಸಲ್ಲಿಸಿರುವುದು ನಿಜವೇ; | |
| ಉ) | ಹಾಗಿದ್ದಲ್ಲಿ, ಈ ಎರಡು ಗ್ರಾಮಗಳ ಬಳಿ ಮದ್ದೂರು ಪಟ್ಟಣವನ್ನು ಪ್ರವೇಶಿಸಲು ಮತ್ತು ನಿರ್ಗಮಿಸಲು ಸರ್ವೀಸ್ ರಸ್ತೆಯನ್ನು ನಿರ್ಮಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ? | ಗುತ್ತಿಗೆ ಕರಾರಿನಂತೆ ಕಿ.ಮೀ.73.80 ರಲ್ಲಿ ಮದ್ದೂರು ಪಟ್ಟಣಕ್ಕೆ ಪ್ರವೇಶ/ನಿರ್ಗಮಿಸಲು ಅವಕಾಶ ಕಲ್ಪಿಸಲಾಗಿರುತ್ತದೆ.<br><br>ಆದಾಗ್ಯೂ, ಮದ್ದೂರು ಪಟ್ಟಣ, ಚಾಮುಂಡೇಶ್ವರಿ ಆಸ್ಪತ್ರೆ ಮತ್ತು ತುಮಕೂರು-ಕುಣಿಗಲ್ ರಸ್ತೆಗೆ ಪ್ರವೇಶಿಸುವ ವಾಹನಗಳಿಗೆ ಟೋಲ್ ಇಲ್ಲದೆ ಸಮರ್ಪಕವಾಗಿ ಪ್ರವೇಶ ಹಾಗೂ ನಿರ್ಗಮಿಸಲು ಕಿ.ಮೀ.72.20 ರಲ್ಲಿ (ಕೋಲೂರು ಗ್ರಾಮದ ಬಳಿ) ಪ್ರವೇಶ/ನಿರ್ಗಮನ ಸೌಲಭ್ಯ ಒದಗಿಸಲಾಗಿದೆ. ಈ ಸಂಬಂಧ ಕೇಂದ್ರ ಭೂಸಾರಿಗೆ ಮಂತ್ರಾಲಯದ ಗೆಜೆಟ್ ನಲ್ಲಿ 3 (A) ನೋಟಿಫಿಕೇಷನ್ ಪ್ರಕಟಣೆಯಾಗಿದ್ದು, 3 (D) ನೋಟಿಫಿಕೇಷನ್ ತಯಾರಿಸುವ ಪ್ರಕ್ರಿಯೆ ಪ್ರಗತಿಯಲ್ಲಿದೆ. |

ಕಡತ ಸಂಖ್ಯೆ: ಲೋಇ 421 ಸಿಎನ್‌ಹೆಚ್ 2022 (ಇ)

(ಸಿ.ಸಿ. ಪಾಟೀಲ)
ಲೋಕೋಪಯೋಗಿ ಸಚಿವರು